INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -5, January-February, 2022,
PageNo,78-87
Peer Reviewed Journal, Referred Journal

# ಕರ್ನಾಟಕ ರಾಜ್ಯದ ಆಧುನಿಕ ಬೌದ್ಧ ಕೇಂದ್ರಗಳ ಕುರಿತ ಒಂದು ಸಾಂಸ್ಕೃತಿಕ ಅಧ್ಯಯನ

ಡಾ ರಂಗನಾಥ.ವೈ.[1]

ಜಗತ್ತಿನ ಮಹಾಬೆಳಕು ಬುದ್ಧಗುರು ಅಹಿಂಸೆ ಮತ್ತು ಶಾಂತಿಯ ಮಾರ್ಗವನ್ನು ತೋರಿದವರು. ದೇಶ ವಿದೇಶಗಳಲ್ಲಿ ಮಹಾಗುರು ಬುದ್ಧರ ಮಹಾಪರಿನಿಬ್ಬಾಣ ಅನಂತರ ಅವರ ಶಿಷ್ಯರು ಮತ್ತು ಅನುಯಾಯಿಗಳು ಅನೇಕ ಅನೇಕ ವಿಹಾರಗಳು ಮತ್ತು ಬೌದ್ಧ ಕೇಂದ್ರಗಳನ್ನು ತೆರೆದು ಗುರುಬುದ್ಧ ಬೋಧಿಸಿದ್ದಂತಹ ಬೋಧನೆಗಳ ಪ್ರಸ್ತುತತೆಯನ್ನು ತಿಳಿಸುತ್ತಾ ಕಾಲಾನುಕ್ರಮದಲ್ಲಿ ಬಂದಿರುತ್ತಾರೆ. ಅದರಲ್ಲೂ ಪ್ರಧಾನವಾಗಿ ಬೋಧಿಸತ್ತ್ವ ಬಾಬಾಸಾಹೇಬ್ ಡಾ.ಅಂಬೇಡ್ಕರ್ ಅವರು ಭಾರತ ದೇಶದಿಂದಲ್ಲೇ ಹೊರ ದೇಶಗಳಿಗೆ ಬಲವಂತವಾಗಿ ಹೋಗಿದ್ದಂತಹ ಬೌದ್ಧಧಮ್ಮವನ್ನು 1956ನೇ ಅಕ್ಟೋಬರ್ 14ರಂದು ಮರಳಿ ತಂದು ಪುನರ್ ಸ್ಥಾಪಿಸಿದ್ದರು. ಅಂದರೆ, ಅಂಬೇಡ್ಕರ್ ಅವರು ತಾವು ಮತ್ತು ಐದು ಲಕ್ಷಕ್ಕೂ ಹೆಚ್ಚು ಅನುಯಾಯಿಗಳೊಂದಿಗೆ ಈ ಬೌದ್ಧಧಮ್ಮಕ್ಕೆ ಮರಳಿದರು. ಹೀಗೆ, ತಮ್ಮ ಸ್ವಂತ ಮನೆಗೆ ಮರಳುವ ಮುಖೇನ ಬೌದ್ಧಧಮ್ಮಕ್ಕೆ ಒಂದು ತಳಪಾಯವನ್ನು ನಿರ್ಮಿಸಿದರು. ಅನಂತರ ಬೌದ್ಧಧಮ್ಮದ ಪ್ರಚಾರಕ್ಕಾಗಿ ಸ್ಥಾಪಿಸಿರುವಂತಹ ಬೌದ್ಧ ಕೇಂದ್ರದಲ್ಲಿನ ಪ್ರತಿಯೊಬ್ಬ ಮಹಾಭಿಕ್ಕುವೂ ಮೂಢನಂಬಿಕೆ, ಕಂದಾಚಾರ, ಶೋಷಣೆ, ಅನ್ಯಾಯ, ಅಸ್ಪೃಶ್ಯತೆ, ಹಿಂಸೆಯಂತಹ ಜೀವವಿರೋಧಿ ನಿಲುವುಗಳಿಂದಾಗುವ ಅನಾಹುತಗಳನ್ನು ಪರಿಚಯಿಸಿ ಅವುಗಳಿಂದ ಬಿಡುಗಡೆಗೊಳ್ಳಬೇಕಾದ ಮಾರ್ಗಗಳನ್ನು ಈ ಸಮಾಜಕ್ಕೆ ತೋರಿಸಿಕೊಟ್ಟಿರುತ್ತಾರೆ ಎಂದೇ ಹೇಳಬಹುದು.

ಕರ್ನಾಟಕ ರಾಜ್ಯದಲ್ಲಿ ಅನೇಕ ಅನೇಕ ಬೌದ್ಧ ಕೇಂದ್ರಗಳಲ್ಲಿ ಅಕ್ಷರ ಜ್ಞಾನ ನೀಡುವುದರೊಂದಿಗೆ ಧಮ್ಮಮಾರ್ಗದ ಮೇಲೆ ನಡೆಯುವ ದಾರಿಯನ್ನು ತಿಳಿಸಿಕೊಡಲಾಗುತ್ತದೆ. ಕರ್ನಾಟಕದಲ್ಲಿ ವಿಶೇಷವಾಗಿ ಆಧುನಿಕ ಭಾರತದಲ್ಲಿ ಬೌದ್ಧಧಮ್ಮವನ್ನು ಮತ್ತೇ ಪ್ರವರ್ಧಮಾನಕ್ಕೆ ಬರಲು ಶ್ರಮಿಸಿದ ಶ್ರೀಲಂಕಾದ ಅನಗಾರಿಕ ಧಮ್ಮಪಾಲರು, ಮಹಾಭಿಕ್ಕು ಚಂದ್ರಮಣಿ ಮಹಾಥೇರರು, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರುಗಳು ಪ್ರಮುಖರಾದವರು. ಕರ್ನಾಟಕ ರಾಜ್ಯದ ರಾಜಧಾನಿಯೇ ಆಗಿರುವಂತಹ ಬೆಂಗಳೂರಿನಲ್ಲಿಯ ಮಹಾಬೋಧಿ ಸೊಸೈಟಿಯ ಸ್ಥಾಪಕರಾದ ಅಭಿಧಮ್ಮ ಆಚಾರ್ಯ ಡಾ.ಬುದ್ಧ ರಕ್ಖಿತ ಭಂತೇಜಿ ಅವರು ತಮ್ಮ ಕೇಂದ್ರದಲ್ಲಿ ಮಕ್ಕಳಿಗೆ ಶಿಕ್ಷಣ ನೀಡುತ್ತಾ, ಪಾಳಿ ಭಾಷಾಧ್ಯಯನ ಮಾಡಿಸುತ್ತ

1. ಉಪನ್ಯಾಸಕರು ಇತಿಹಾಸ ವಿಭಾಗ ಸರ್ಕಾರಿ ಪದವಿ ಪೂರ್ವ ಕಾಲೇಜು ರಾಜೀವ್ ನಗರ, ಮೈಸೂರು

ಬೌದ್ಧಧಮ್ಮದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವಲ್ಲಿ ಶ್ರಮಿಸುತ್ತಾ, ಬುದ್ಧಗುರುವಿನ ಬೋಧನೆಗಳನ್ನು ಅವರು ಅನಂತರ ಪ್ರಕಟಿಸಿರುತ್ತಾರೆ. ಅವುಗಳೇ ತ್ರಿಪಿಟಕಗಳು. ಈ ತ್ರಿಪಿಟಕಗಳು ಕನ್ನಡನಾಡಿನಲ್ಲಿ ಕನ್ನಡಿಗರಿಗೆ ನಮ್ಮ ಭಾಷೆಯಲ್ಲಿಯೇ ಸಿಗುವಂತೆ ಮಾಡಿದ್ದಾರೆ. ಆ ಮುಖೇನ ಬೌದ್ಧಧಮ್ಮದ ಅರಿವನ್ನು ಮತ್ತು ಆ ಮೂಲ ಸಾಹಿತ್ಯ ಉಪದೇಶಗಳನ್ನು ಹೆಚ್ಚಿನ ರೀತಿಯಲ್ಲಿ ಆಸಕ್ತರಿಗೆ ನೀಡಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತಗೊಂಡಿರುವಂತಹ ಬಹುತೇಕ ಬೌದ್ಧ ಕೇಂದ್ರಗಳು ಬಾಬಾಸಾಹೇಬ್ ಅಂಬೇಡ್ಕರ್ ಅವರು ತಾವು ಬೌದ್ಧಧಮ್ಮವನ್ನು ಸ್ವೀಕರಿಸಿ, ತಮ್ಮ ಅನುಯಾಯಿಗಳಿಗೆ ಇಪ್ಪತ್ತೆರಡು ಪ್ರತಿಜ್ಞಾ ವಿಧಿಗಳನ್ನು ಬೋಧಿಸಿರುತ್ತಾರೆ. ಆ 22 ಪ್ರತಿಜ್ಞಾ ವಿಧಿಗಳನ್ನು ಉಪಾಸಕರು ಅದನ್ನಾಲಿಸುತ್ತಾರೆ, ಪಾಲಿಸುತ್ತಾರೆ ಮತ್ತು ಆಚರಿಸುತ್ತಾರೆ. ಮಹಾನ್ ಬೋಧಿಸತ್ತ್ವ ಅಂಬೇಡ್ಕರ್ ಅವರು ಬೌದ್ಧಧಮ್ಮವನ್ನು ಆಳವಾಗಿ ಅಧ್ಯಯನ ಮಾಡಿ ಅದು ಒಳಗೊಳ್ಳುವ ಜೀವಪರ ನಿಲುವುಗಳಿಗೆ ಮಾರು ಹೋದವರು. ಹಾಗೆಯೇ ಅಧ್ಯಯನ ಮಾಡುತ್ತ ಈ ದೇಶದ ದಲಿತ ದಮನಿತರು ನಾಗ ಜನಾಂಗದ ವಾರಸುದಾರರು, ನಾಗರು ಬೌದ್ಧರಾಗಿದ್ದರು ಎಂಬ ಐತಿಹಾಸಿಕ ಸತ್ಯವನ್ನು ಪ್ರತಿಪಾದಿಸಿದರು. ಈ ದೇಶದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಗಳು ಅಸ್ಪೃಶ್ಯತೆಯನ್ನು, ಶೋಷಣೆ ಅವಮಾನಗಳನ್ನು ನಿರಂತರ ಜೀವಂತ ವಿಡಲು ಶ್ರಮಿಸುತ್ತವೆ ಇದೆಂದೂ ಬದಲಾಗದ ಮತ್ತು ಹಂತಗಳೇ ಇಲ್ಲಾದಂತಹ ಪಿರ್‍ಯಾಮಿಡ ಆಗಿದೆ ಎಂದರಿತು ಅಂಬೇಡ್ಕರ್ ಅವರು ಬೌದ್ಧಧಮ್ಮವನ್ನು ಅಪ್ಪಿಕೊಂಡರು. ಹಾಗೆಯೇ, ಡಾ. ಅಂಬೇಡ್ಕರ್ ಅವರು 1956 ಅಕ್ಟೋಬರ್ 14ರಂದು ತಾವು ಧಮ್ಮದೀಕ್ಷೆ ಪಡೆದ ಅನಂತರ ನಾಗಪುರದ **ದೀಕ್ಷಾಭೂಮಿ**ಯಲ್ಲಿ ಬೋಧಿಸಿದ 22 ಪ್ರತಿಜ್ಞೆಗಳು ಕರ್ನಾಟಕದ ದಲಿತ ಬೌದ್ಧರಿಗೆ ಬೌದ್ಧ ಜೀವನದ ಮೂಲ ಮಾರ್ಗದರ್ಶಿ ಸೂತ್ರಗಳಾಗಿವೆ. ಹೀಗಾಗಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ 22 ಪ್ರತಿಜ್ಞೆಗಳನ್ನು ಕರ್ನಾಟಕ ಆಧುನಿಕ ಬೌದ್ಧರು, ಬೌದ್ಧ ಕೇಂದ್ರಗಳಲ್ಲಿನ ಭಿಕ್ಕುಗಳಿಂದ ಅರಿತು-ಕಲಿತು ಧಾರ್ಮಿಕ ಜ್ಞಾನವನ್ನು ಪಡೆದು ಆಚರಣೆಯಲ್ಲಿ ತೊಡಗುತ್ತಿರುವುದು ವಿಶೇಷವಾದದ್ದಾಗಿದೆ.

ಕೆ.ಜಿ.ಎಫ್.ನ ಬೌದ್ಧ ಕೇಂದ್ರ, ಬೆಂಗಳೂರಿನ ಪ್ರೇಜರ್ ಟೌನ್ ಬೌದ್ಧ ವಿಹಾರ, ಗೂಡ್‌ಸೆಡ್ ರಸ್ತೆ ಹುಬ್ಬಳ್ಳಿಯ ಬೌದ್ಧ ವಿಹಾರ, ಬೆಂಗಳೂರಿನ ಗಾಂಧೀನಗರದ ಮಹಾಬೋಧಿ ಸೊಸೈಟಿಯ ಲೋಕಶಾಂತಿ ಬೌದ್ಧ ವಿಹಾರ, ಬೀದರ ಜಿಲ್ಲೆಯ ಬಸವ ಕಲ್ಯಾಣ ತಾಲೂಕಿನ ಮೋರ್ಖಂಡಿಯ ಜೇತವನ ಬೌದ್ಧ ವಿಹಾರ, ರೇಕುಳಗಿ ಮೌಂಟ್ (ತಾ. ಹುಮನಾಬಾದ)ನ ಅನಾಥ ಪಿಂಡಿಕ ಬೌದ್ಧ ವಿಹಾರ, ಕಲಬುರಗಿಯ ಬೌದ್ಧ ವಿಹಾರ, ಬಿಜಾಪುರ ಜಲನಗರದ ಸಾರಿಪುತ್ರ ಬುದ್ಧ ವಿಹಾರ, ಹುಕ್ಕೇರಿ ತಾಲೂಕಿನ ನೇರಲಿಯಲ್ಲಿನ ಸುಬೋಧಿ ಬೌದ್ಧ ವಿಹಾರ ಮತ್ತು ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಅಂಗ ಸಂಸ್ಥೆಯೇ ಆಗಿರುವಂತಹ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದಲ್ಲಿ ಸ್ನಾತಕೋತ್ತರ ಬುದ್ಧ ಅಧ್ಯಯನವನ್ನು ಕೂಡ ಆರಂಭಿಸಿ ಬುದ್ಧನ ಸಮಗ್ರ ಅಧ್ಯಯನವನ್ನು ಕೂಡ ನಡೆಸಲಾಗುತ್ತಿದೆ

ಎಂಬುದನ್ನು ಗುರುತಿಸಬಹುದು. ಹೀಗೆ, ಕರ್ನಾಟಕ ರಾಜ್ಯದಾದ್ಯಂತ ಬೌದ್ಧ ವಿಹಾರಗಳು, ಬೌದ್ಧ ಸಂಘ ಸಂಸ್ಥೆಗಳು ಮತ್ತು ಬೌದ್ಧ ಅಧ್ಯಯನ ಹಾಗೂ ಸಂಶೋಧನ ಕೇಂದ್ರಗಳು ಬೆಳೆದು ಬೌದ್ಧಧಮ್ಮದ ಸಮಾಜ ಪರಿವರ್ತನೆ ಮತ್ತು ಧಾರ್ಮಿಕತೆಯನ್ನು ವಿಸ್ತರಿಸುತ್ತಿರುವುದನ್ನು ಗುರುತಿಸಬಹುದು.

ಇಂದಿನ ಬೌದ್ಧ ಕೇಂದ್ರಗಳು ವೈಚಾರಿಕ ಹಾಗೂ ವೈಜ್ಞಾನಿಕ ಚಿಂತನೆಗಳನ್ನು ಜನರ ಅರಿವಿಗೆ ತಂದುಕೊಡುತ್ತ ಹೆಚ್ಚು ಹೆಚ್ಚು ಸಾಮಾಜಿಕ ಸೇವೆಯಲ್ಲಿಯೂ ತೊಡಗಿಕೊಂಡಿವೆ. ಅನಾಥರಿಗೆ, ಅಬಲರಿಗೆ, ನಿರಾಶ್ರಿತರಿಗೆ, ಆಶ್ರಯ – ಅನ್ನ ಒದಗಿಸುವ ಕೆಲಸ ಮಾಡುತ್ತಿವೆ. ಕೆಲವು ಬೌದ್ಧ ವಿಹಾರಗಳು ಆಸ್ಪತ್ರೆಯನ್ನು ಆರಂಭಿಸಿ ರೋಗಿಗಳ ಸೇವೆಯಲ್ಲಿ ತೊಡಗಿವೆ. ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ಮನೆ ಮಾಡಿರುವ ಅನಕ್ಷರತೆ, ಕಂದಾಚಾರ, ಮೂಢನಂಬಿಕೆ, ಶೋಷಣೆ, ಬಾಲ್ಯ ವಿವಾಹ, ಪ್ರಾಣಿಬಲಿಯಂತಹ ನಿಕೃಷ್ಟ, ಅನಿಷ್ಟಗಳನ್ನು ಕೈಬಿಡಲು ಉಪದೇಶಿಸಿ ಸತ್ಯವನ್ನು ತಿಳಿಸಿ ಕೊಡಲಾಗುತ್ತಿದೆ. ಬುದ್ಧಧಮ್ಮದ ಮಧ್ಯಮ ಮಾರ್ಗದಲ್ಲಿ ಯಾವುದೇ ರೀತಿಯ, ಜಾತಿ–ಭೇದ ಸ್ತ್ರೀ–ಪುರುಷ ಭೇದ, ಬಡವ–ಬಲ್ಲಿದ ಬೇದ, ಶ್ರೇಷ್ಠ–ಕನಿಷ್ಠ ಪವಿತ್ರ– ಅಪವಿತ್ರ ಎಂಬಂತಹ ಬೇದಭಾವಗಳಿಲ್ಲ. ಹೀಗಾಗಿ ಸರ್ವಜನೋ ಸುಖಿನೋ ಭವಂತೋ ಎನ್ನುವ ಸರ್ವರೂ ಇಷ್ಟಪಡುವ ಮಾನವ ಪರ ಮತ್ತು ಜೀವಪರ ಚಿಂತನೆಗಳನ್ನು ಕಾರ್ಯರೂಪಕ್ಕೆ ತರುವ ಆ ಮೂಲಕ ಬದುಕು ಸುಖಮಯ–ಶಾಂತಿಮಯಗೊಳಿಸುವತ್ತ ಇಂದಿನ ಬೌದ್ಧ ಕೇಂದ್ರಗಳು ದಾಪುಗಾಲಿಡುತ್ತಿರುವುದು ತುಂಬ ವಿಭಿನ್ನ ಬೆಳವಣಿಗೆಯಾಗಿದೆ. ಸತ್ಯವನ್ನು ಮನಗಾಣುತ್ತಿರುವ ಜನರು ಮತ್ತು ಬೌದ್ಧಧಮ್ಮದ ಅವಲಂಬಿ ಉಪಾಸಕರು ಇಂದು ಬೌದ್ಧ ಕೇಂದ್ರಗಳೆಡೆಗೆ ಮುಖಮಾಡುತ್ತಿರುವುದನ್ನು ಹೆಚ್ಚಿನ ರೀತಿಯಲ್ಲಿಯೇ ಕಾಣಬಹುದಾಗಿದೆ.

ಭಾರತದಾದ್ಯಂತ ಅದರಲ್ಲಿಯೂ ವಿಶೇಷವಾಗಿ ಕರ್ನಾಟಕದಲ್ಲಿ ಹೀಗೆ ಹಲವರ ಪ್ರಯತ್ನದಿಂದ ಡಾ. ಅಂಬೇಡ್ಕರ್ ಅವರ ಪ್ರಭಾವ–ಪ್ರೇರಣೆಯಿಂದ ಹುಟ್ಟಿಕೊಂಡಿರುವ ಬೌದ್ಧ ವಿಹಾರಗಳ ಚರಿತ್ರೆ ಅನನ್ಯವಾಗಿದೆ. ಅವುಗಳ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯವನ್ನು ಗುರುತಿಸುವುದು ಒಂದು ಸಾಂಸ್ಕೃತಿಕ ಅಧ್ಯಯನದ ಅವಶ್ಯಕತೆಯಾಗಿದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಪ್ರಾತಿನಿಧಿಕತೆಯನ್ನು ಪ್ರತಿನಿಧಿಸುವಂತಹ ಆಧುನಿಕ ಬೌದ್ಧ ಕೇಂದ್ರಗಳು ಸಲ್ಲಿಸುತ್ತಿರುವ ಸೇವಾ ಸಾಧನೆಗಳನ್ನು ಗುರುತಿಸುವ ಕಾರ್ಯವೂ ಈ ಲೇಖನದಲ್ಲಿ ಮಾಡಲಾಗಿದೆ.

ಜಾಗತಿಕ ಮಟ್ಟದಲ್ಲಿ ಭಾರತ ದೇಶದಂತೆಯೇ, ದೇಶದಲ್ಲಿನ ಇತರ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಅನೇಕ ಧ್ರ್ಮಗಳ ಆಗರವೇ ಆಗಿದೆ. ಏಕೆಂದರೆ, ಯಾವುದೇ ಒಂದು ಧರ್ಮದ ಅಸ್ತಿತ್ವ ಅದನ್ನು ಅನುಸರಿಸುವ ಮಾನವನಿಂದ ಮಾತ್ರ ಕಂಡುಕೊಳ್ಳಲು ಸಾಧ್ಯ. ಭಾರತ ದೇಶವು ಮೂಲತಃ ಬುದ್ಧಭೂಮಿ ಎಂಬುದು ಎಷ್ಟು ಸತ್ಯವೋ ಅದು ಭಾರತದಲ್ಲಿ ಹುಟ್ಟಿ ಜಗತ್ತಿನೆಲ್ಲೆಡೆ ಶ್ರೇಷ್ಠ ಮಾನವ ಧರ್ಮವಾಗಿ ಬೆಳೆದಿರುವುದೂ ಅಷ್ಟೇ ಸತ್ಯವೇ ಆಗಿರುತ್ತದೆ. ಬೌದ್ಧಧಮ್ಮವೂ ಅದು ಕೇವಲ

ಧರ್ಮವಾಗಿರದೆ ವಾಸ್ತವದಲ್ಲಿ ಅದೊಂದು ಜೀವನದ ಒಂದು ಮಾರ್ಗ ಮತ್ತು ಆ ಬಗೆಯ ವಿಧಾನ ಎನ್ನಲಾಗುತ್ತದೆ. ಅಸಹಾಯಕ ಮಾನವ ಬದುಕನ್ನು ಬಲಶಾಲಿಯಾಗಿಸಲು ಶ್ರಮಿಸುತ್ತಿರುವುದು ಮತ್ತು ಜಗತ್ತಿಗೆ ಯುದ್ಧದ ಕಾಲಸಂದರ್ಭದಲ್ಲಿಯೂ ಶಾಂತಿಯನ್ನು ಮತ್ತು ಅಹಿಂಸೆಯನ್ನು ಬಯಸುತ್ತಿರುವುದು ಈ ಬೌದ್ಧಧಮ್ಮವೇ ಎನ್ನಬಹುದು. ಮಹಾಗುರು ಬುದ್ಧರ ಒಂದು ವ್ಯಾಖ್ಯೆದಂತೆ **'ನಿನಗೆ ನೀನೇ ಬೆಳಕು, ನಿನಗೆ ನೀನ ಮಾರ್ಗ'** ಎಂದು ಬೋಧಿಸಿರುವುದು ಕೂಡ ಯಾರಿಗೂ ಸರಿ ಸಾಟಿಯಾದ ದಾರ್ಶನಿಕ ಮತ್ತೊಬ್ಬನಿಲ್ಲ. ಅಂತೆಯೇ ಜಗತ್ತಿನ ಹುಳುಕು ಕೊಳಕುಗಳನ್ನು ಸೃಷ್ಟಿಸಿದ ಧಾರ್ಮಿಕ ಸಂಪ್ರದಾಯಗಳಿಂದ ಅಹಿಂಸಾತ್ಮಕವಾಗಿ ಶೋಷಿತರಿಗೆ ಮುಕ್ತಿ ನೀಡುವ ಮತ್ತೊಂದು ಧರ್ಮ ಜಗತ್ತಿನಲಿಲ್ಲ ಎಂಬ ಮಾತನ್ನು ಗಮನಿಸಿದರೆ; ಬುದ್ಧ ಮತ್ತು ಆತನ ಧಮ್ಮವೂ ಎಷ್ಟೊಂದು ಜನಪ್ರಿಯವಾಗಿತ್ತು ಎಂಬುದು ಅರಿವಿಗೆ ಬರುತ್ತದೆ.

ಆಧುನಿಕ ಕಾಲಸಂದರ್ಭದಲ್ಲಿ ಐಯೋಥಿದಾಸ್ ಅವರ ಪ್ರಭಾವಕ್ಕೊಳಗಾದ ಅನೇಕ ಬೌದ್ಧ ಮಿಷನರಿಗಳು ನಾನಾ ಕಡೆಗಳಲ್ಲಿ ವಲಸೆ ಹೋದರು. ಇವರ ಬಹುಮುಖ್ಯ ಉದ್ದೇಶ ಬೌದ್ಧಧಮ್ಮದ ಅಧ್ಯಯನ ಹಾಗೂ ಪ್ರಸಾರ ಮಾಡುವುದಾಗಿತ್ತು. "ಪಿ. ಕೃಷ್ಣಸ್ವಾಮಿಯಾರ್ ಬರ್ಮಾ ದೇಶಕ್ಕೆ, ಐ. ರಾಜರಾಮ (ಪಂಡಿತ ಐಯೋಥಿದಾಸ್ ಅವರ ಪುತ್ರ) ದಕ್ಷಿಣ ಆಫ್ರಿಕಾಕ್ಕೆ ಮತ್ತು ಎಂ ರಾಘವರ್ ಅವರು ಕರ್ನಾಟಕದ ಕೆ.ಜಿ.ಎಫ್.ಗೆ ವಲಸೆ ಬಂದರು." ಹಾಗೆಯೇ, ಬಂದ ಎಂ. ರಾಘವರ್ ಆರಂಭದಲ್ಲಿ ಅನೇಕ ಕಷ್ಟಗಳನ್ನು ವೈದಿಕರಿಂದ, ಧಾರ್ಮಿಕ ಮತಾಂದರಿಂದಲೂ ಎದುರಿಸಬೇಕಾಯಿತು ಮತ್ತು ಹಲ್ಲೆಗೊಳಗಾಗಬೇಕಾಯಿತು. ಮುಂದೆ ಕೋಲಾರ ಮತ್ತು ಬೆಂಗಳೂರು ಶಾಖೆಗಳಲ್ಲಿ ಬೌದ್ಧಧಮ್ಮದ ಕಾರ್ಯಚಟುವಟಿಕೆಗಳು ಆರಂಭವಾದವು. 1956ರಲ್ಲಿ ಬೆಂಗಳೂರಿನಲ್ಲಿ ಆರಂಭಗೊಂಡ ಮಹಾಬೋಧಿ ಸೊಸೈಟಿಯು ದಕ್ಷಿಣ ಭಾರತ'ದಲ್ಲಿಯೇ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಹೀಗೆ, ಆರಂಭಗೊಂಡ ಕರ್ನಾಟಕ ರಾಜ್ಯದಲ್ಲಿ ಆಧುನಿಕ ಬೌದ್ಧ ಕೇಂದ್ರಗಳು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಆಶಯದಂತೆ ಭಾರತವನ್ನು ಪ್ರಬುದ್ಧ ಭಾರತದ ಕಡೆಗೆ ಕೊಂಡ್ಯೊಯಲ್ಲು ಶ್ರಮಿಸುತ್ತಿವೆ.

ಕ್ರಿ.ಶ. 1907ರಲ್ಲಿ ಕೋಲಾರದ ಮಾರಿಕುಪ್ಪಂನಲ್ಲಿ ಆರಂಭಗೊಂಡಿರುವ ಬೌದ್ಧ ಕೇಂದ್ರದಲ್ಲಿ, 1907ರಲ್ಲಿಯೇ ಆರಂಭವಾದ ಬೆಂಗಳೂರಿನ ಫ್ರೇಜರ್‌ಟೌನ್‌ನ ಬೌದ್ಧ ಕೇಂದ್ರದಲ್ಲಿ ಬೌದ್ಧಧಮ್ಮದ ಮೂಲ ತತ್ವಗಳನ್ನು ಆಚರಣೆಯಲ್ಲಿ ತರಲು ಪ್ರತಿನಿತ್ಯ ಪಠನ ಕಾರ್ಯವೂ ಹೆಚ್ಚಿನ ರೀತಿಯಲ್ಲಿಯೇ ನಡೆಯುತ್ತದೆ. ತ್ರಿಸರಣ, ಪಂಚಶೀಲ, ಅಷ್ಟಶೀಲ, ದಶಶೀಲ, ಬುದ್ಧವಂದನ, ಧಮ್ಮ ವಂದನ ಹಾಗೂ ಸಂಘ ವಂದನಗಳನ್ನು ಕಲಿಸಿಕೊಡಲಾಗುತ್ತದೆ. ಉಪಾಸಕರು, ಬಿಕ್ಷುಗಳ, ಭಂತೇಜಿಗಳ ಮಾರ್ಗದರ್ಶನದಲ್ಲಿ ಧರ್ಮದ ದಾರಿಯಲ್ಲಿ ನಡೆಯಲು ಮುಂದಾಗುತ್ತಾರೆ.

ಮೈಸೂರು ಮಹಾನಗರದಲ್ಲಿರುವಂತಹ ಮಹಾಬೋಧಿ ಶಾಲೆಯೂ ಕೂಡ ಒಂದು ಬೌದ್ಧಧಮ್ಮದ ಹಿನ್ನೆಲೆಯಲ್ಲಿಯೇ ಬೆಂಗಳೂರಿನ ಮಹಾಬೋಧಿ ಸಂಸ್ಥೆಯ ಒಂದು ಅಂಗ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಈ ಬೌದ್ಧ ಕೇಂದ್ರದಲ್ಲಿ ವಿದ್ಯಾರ್ಥಿ ನಿಲಯದ ವಾಸಿಗಳಗಾಗಿ ಎಂಟು ಕೋಣೆಗಳದ್ದು ಅಲ್ಲಿ ವಾಸಿಸುವ ವಿದ್ಯಾರ್ಥಿಗಳಗೆ ಯಾವುದೇ ಕೊರತೆಯಿಲ್ಲದಂತೆ ವ್ಯವಸ್ಥೆ ಮಾಡಲಾಗಿದೆ. ವಸತಿ ಗೃಹದಲ್ಲಿದ್ದು ಓದುವ ಮಕ್ಕಳಗೆ ಪ್ರತಿನಿತ್ಯ ಪೌಷ್ಟಿಕ ಆಹಾರವನ್ನು ಒದಗಿಸಲಾಗುತ್ತದೆ. ಹಾಲು, ಹಣ್ಣು, ಮುಂಜಾನೆ ಸಾಯಂಕಾಲ ತಪ್ಪದೆ ವಿತರಿಸಲಾಗುತ್ತದೆ. ಆಗಾಗ ಮಕ್ಕಳನ್ನು ಗೋವಾ, ಮಡಿಕೇರಿ, ನಾಗರಹೊಳೆಯಂತಹ ಪ್ರಕೃತಿ ಸೌಂದರ್ಯದಿಂದ ಕೂಡಿದ ಸ್ಥಳಗಳಗೆ ಪ್ರವಾಸ ಕರೆದುಕೊಂಡು ಹೋಗಲಾಗುತ್ತದೆ. ಇಲ್ಲಿ ಅಧ್ಯಯನ ಮಾಡಿರುವ ವಿದ್ಯಾರ್ಥಿಗಳು ದೇಶ– ವಿದೇಶಗಳಲ್ಲಿ ವೈದ್ಯರಾಗಿ, ಇಂಜಿನಿಯರ್ ಆಗಿ, ಶಿಕ್ಷಕರಾಗಿ, ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವುದು ಮೈಸೂರಿನ ಈ ಬುದ್ಧ ಕೇಂದ್ರವು ಒಂದು ವಿಶಿಷ್ಟ ಹಾಗೂ ಹೆಮ್ಮೆಯ ಕೊಡುಗೆ ಎನ್ನಬಹುದು. ಇಲ್ಲಿ ಅಧ್ಯಯನಕ್ಕೆ ಬರುವ ಮಕ್ಕಳಗೆ ನೈತಿಕ ಶಿಕ್ಷಣವನ್ನು ನೀಡಲಾಗುತ್ತದೆ. ಈ ವಿಹಾರದ ವತಿಯಿಂದ ರೋಗಿಗಳಗೆ ಸಹಾಯ ಮಾಡಲಾಗುತ್ತದೆ. ಅಲ್ಲಲ್ಲಿ ಆವಶ್ಯವಿದ್ದಲ್ಲಿ ಮೆಡಿಕಲ್ ಕ್ಯಾಂಪ್‌ಗಳನ್ನು ನಡೆಸಲಾಗುತ್ತದೆ. ರೋಗಿಗಳಗೆ ಆರೈಕೆಯ ಜೊತೆಗೆ ಮಾನಸಿಕ ಬಲ, ನೈತಿಕ ಮಾರ್ಗದ ಕುರಿತು ತಿಳುವಳಕೆಯನ್ನು ನೀಡಲಾಗುತ್ತದೆ. ಧ್ಯಾನದಿಂದ ಲಭಿಸುವ ಲಾಭದ ಕುರಿತಂತೆಯೂ ಕಲಸಿಕೊಡಲಾಗುತ್ತದೆ. ಹೀಗೆ, ಈ ಬೌದ್ಧ ಕೇಂದ್ರವು ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಯ ಆಶಯವನ್ನಿಟ್ಟುಕೊಂಡು ಕಾರ್ಯನಿರತವಾಗಿದೆ.

ಬೆಂಗಳೂರಿನ ಗಾಂಧಿನಗರದಲ್ಲಿರುವ ಮಹಾಬೋಧಿ ಸೊಸೈಟಿಯು ಬೌದ್ಧ ಶಿಕ್ಷಣ ಕ್ರಮದ ಪ್ರಯೋಗಿಕ ಅನುಷ್ಠಾನಕ್ಕೆ ನಿರಂತರ ಶ್ರಮಿಸುತ್ತಿರುವುದನ್ನು ಅರಿಯಬಹುದಾಗಿದೆ. 'ಬೋಧಿವೃಕ್ಷದ ಕಸಿಯೊಂದನ್ನು ಹಿಡಿದು ಬೆಂಗಳೂರಿಗೆ ಬಂದ ಬುದ್ಧರಕ್ಷಿತರು 1956ರಲ್ಲಿ ಬೆಂಗಳೂರಿನಲ್ಲಿ ಮಹಾಬೋಧಿ ಸೊಸೈಟಿಯನ್ನು ಪ್ರಾರಂಭಿಸಿದರು. ಅದರೊಂದಿಗೆ ಬೌದ್ಧ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಪ್ರಯತ್ನಿಸಿದರು.' ಶ್ರೀಲಂಕಾದಲ್ಲಿ ಪೂಜ್ಯ ಅನಗಾರಿಕ ಧರ್ಮಪಾಲರು ಅನೇಕ ಬೌದ್ಧ ಶಿಕ್ಷಣ ಸಂಸ್ಥೆಗಳ ಪ್ರಗತಿಗೆ, ಕೃಷಿ ಶಿಕ್ಷಣ, ಔದ್ಯೋಗಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದಂತೆ ಬೆಂಗಳೂರಿನಲ್ಲಿ ಆಚಾರ್ಯ ಬುದ್ಧರಕ್ಷಿತರು ಶ್ರಮಿಸಿದರು. ಸಂತಸದ ಕಲಕೆಯನ್ನು ಸಾಧಿಸಲು ಅನುಕೂಲಕರ ಪ್ರಕೃತಿಯು ಪರಿಸರದಲ್ಲಿ, ಮಕ್ಕಳ ಮನಸ್ಸನ್ನು ಅರಳಸುವ ವಾತಾವರಣದಲ್ಲಿ ಮಹಾಬೋಧಿ ಸಂಸ್ಥೆಯು ಮುಂದಾಗಿದೆ. ಮಹತ್ವದ ದಿನಾಚರಣೆಗಳನ್ನು ಆಯೋಜಿಸಿ ಈ ವಿಷಯಗಳಲ್ಲಿ ಬುದ್ಧ ಬೋಧಿಸಿದ್ದ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಗಳ ಆಧಾರದ ಮೇಲೆ ಪ್ರಜ್ಞಾ, ಕರುಣಾ, ಸಮತಾ, ಪ್ರೀತಿಯ ಸಂವೇದನೆಗಳನ್ನು ಪ್ರಾಥಮಿಕ ಹಂತದಲ್ಲಿಯೇ ಮಕ್ಕಳಲ್ಲಿ ಬೆಳೆಸಲು ಪ್ರಯತ್ನಿಸುತ್ತಿರುವುದನ್ನು ಅರಿಯಲು ಸಾಧ್ಯವಿದೆ. ಇಂತಹ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಆಚರಿಸಿ ಮಕ್ಕಳಲ್ಲಿ

ಮಾನವೀಯ ಮೌಲ್ಯಗಳನ್ನು ತಿಳಿಸಿ ಒಳ್ಳೆಯ ಸತ್ಪ್ರಜೆಗಳನ್ನಾಗಿ ಮಾಡುವ, ಶ್ರೇಷ್ಠ ಮಾನವರನ್ನಾಗಿ ಮಾಡುವ ಬೌದ್ಧ ರೀತಿಯ ಶಿಕ್ಷಣದ ಆಚರಣೆ ಇಲ್ಲಿ ಕಂಡುಬರುತ್ತದೆ. ಮಹಾಬೋಧಿ ಸಂಸ್ಥೆಯ ಅಡಿಯಲ್ಲಿಯ ಶಾಲೆಗಳು ಮುಂಜಾನೆ ಹತ್ತು ನಿಮಿಷಗಳ ಧ್ಯಾನದೊಂದಿಗೆ ಆರಂಭಗೊಳ್ಳುತ್ತವೆ. 10 ದಿನಗಳ ಧ್ಯಾನ ಶಿಬಿರಗಳನ್ನು ನಡೆಸಿ ಧ್ಯಾನ ಹೇಗೆ ಮಾಡಬೇಕು ಎಂಬುದನ್ನು ಕಲಿಸಿಕೊಡಲಾಗುತ್ತದೆ. ಪ್ರಸ್ತುತ ಆನಂದ ಭಂತೇಜಿ ಮಹಾಥೇರರು ಅಲ್ಲಿನ ಮಕ್ಕಳ ಕುರಿತಂತೆ ವಿಶೇಷವಾದ ವೈಯಕ್ತಿಕ ಕಾಳಜಿ ಹೊಂದಿರುವುದನ್ನು ಕಾಣುತ್ತೇವೆ. 'ಬಡ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಕೊಡುವುದಕ್ಕಿಂತ ಹೆಚ್ಚಿನ ಉಡುಗೊರೆಯನ್ನೇನು ಕೊಡಲು ಸಾಧ್ಯ? ನಾವು ಅವರ ಸರ್ವತೋಮುಖ ಮತ್ತು ಸಮಗ್ರ ಅಭಿವೃದ್ಧಿಗೆ ಪೂರಕವಾದ ಪಠ್ಯ ಕ್ರಮವನ್ನು ರೂಪಿಸಿದ್ದೇವೆ. ಅದು ಶೈಕ್ಷಣಿಕ, ಆಧ್ಯಾತ್ಮಿಕ, ಪರಿಸರಾತ್ಮಕ ಮತ್ತು ಸಾಮಾಜಿಕ ಶಿಕ್ಷಣವನ್ನು ಒಳಗೊಂಡಿದೆ' ಎಂದು ತುಂಬ ಹೆಮ್ಮೆಯಿಂದ ನುಡಿಯುತ್ತಾರೆ.

ಈ ಸಂಸ್ಥೆಯ ಶಾಲೆಗಳಲ್ಲಿ ಪ್ರತಿ ಶನಿವಾರ ಶಿಕ್ಷಕ, ಶಿಕ್ಷಕಿಯರಿಗಾಗಿಯೇ 'ಧ್ಯಾನದ ಲಘು ತರಬೇತಿ' ಶಿಬಿರಗಳನ್ನು ಹಮ್ಮಿಕೊಂಡು ಅವರ ವೈಯಕ್ತಿಕ ಜೀವನಕ್ಕೂ ಉಪಯುಕ್ತವಾದ ವಿಶೇಷ ತರಬೇತಿಯನ್ನು ಏರ್ಪಡಿಸುವುದು ಕಂಡುಬರುತ್ತದೆ. 'ಹೀಗೆ ಕರ್ನಾಟಕದಲ್ಲಿ ಬೌದ್ಧ ಪರಂಪರೆಯ ಶಿಕ್ಷಣ ಸಂಸ್ಥೆಗಳು ಅನೇಕ ಆಸಕ್ತರ ಮಕ್ಕಳಿಗೆ ಅನಾಥ ಮಕ್ಕಳಿಗೆ, ಸಮಾಜದಲ್ಲಿ ಶಿಕ್ಷಣ ವಂಚಿತ ಮಕ್ಕಳಿಗೆ ಬೌದ್ಧ ರೀತಿಯ ಶಿಕ್ಷಣ ಕ್ರಮದಲ್ಲಿ ತರಬೇತಿ ನೀಡಿ ಉತ್ತಮ ನಾಗರಿಕರನ್ನು ತಯಾರು ಮಾಡುವಲ್ಲಿ ಪ್ರಯತ್ನ ಶೀಲರಾಗಿರುವುದನ್ನು ಗುರುತಿಸಬಹುದು. ಇಲ್ಲಿಯ ವೈವಿಧ್ಯಮಯ ಪ್ರಯತ್ನ ಕರ್ನಾಟಕದ ಇತರೆಡೆಯ ಬೌದ್ಧರ ಶಿಕ್ಷಣ ಕ್ರಮದ ಮೇಲೂ ಪ್ರಭಾವ ಬೀರಿರುವುದನ್ನು ಕೂಡ ಬಹುಸೂಕ್ಷ್ಮವಾಗಿಯೇ ಅರಿಯಬಹದು.

ಕನ್ನಡ ನಾಡಿನ ದಲಿತರ ಆಶಾಕಿರಣವಾಗಿದ್ದಂತಹ ಬಿ. ಬಸವಲಿಂಗಪ್ಪ ಅವರು ಬಾಬಾಸಾಹೇಬ್ ಅಂಬೇಡ್ಕರ್ ಅವರ ಕಟ್ಟಾ ಅನುಯಾಯಿಯಾಗಿದ್ದರು. ಅವರಿಂದ ಪ್ರಭಾವಿರಾಗಿರುವ ಇವರು 1985ರಲ್ಲಿ ಬೌದ್ಧ ಧರ್ಮಚಕ್ರ ಪರಿವರ್ತನ ಸಮಿತಿಯನ್ನು ಸ್ಥಾಪಿಸಿದರು. ಅದನ್ನು **ಕರ್ನಾಟಕ ಬುದ್ಧಧಮ್ಮ ಸಮಿತಿ** ಎಂದೂ ಕೂಡ ಕರೆಯಲಾಗುತ್ತದೆ. ಅಂದಿನ ಮೈಸೂರಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರಿಗೆ ಕಾನೂನು ಸಲಹೆಗಾರರಾಗಿದ್ದ ಡಾ. ಅಂಬೇಡ್ಕರ್ ಅವರಿಗೆ ಮಹಾರಾಜರು ಬೌದ್ಧಧಮ್ಮದ ಕಾರ್ಯಚಟುವಟಿಕೆಗಳಿಗಾಗಿಯೇ ಬೆಂಗಳೂರಿನ ರಾಜಮಹಾಲ್ ವಿಲಾಸ ಬಡಾವಣೆಯಲ್ಲಿ ಐದು ಎಕರೆ ಭೂಮಿಯನ್ನು ನೀಡಿದ್ದರು. ಬಿ. ಬಸವಲಿಂಗಪ್ಪ ಅವರು ಡಾ. ಅಂಬೇಡ್ಕರ್ ಅವರ ಆಶಯದಂತೆ ಅಲ್ಲಿ 'ನಾಗಸೇನಾ ವಿದ್ಯಾಲಯ'ವನ್ನು ಆರಂಭಿಸಿ ಈ ಐದು ಎಕರೆ ಭೂಮಿಯನ್ನು **ಬುದ್ಧಭೂಮಿ** ಎಂದು ನಾಮಕರಣ ಮಾಡಿದರು. ಈ ರೀತಿಯ ವಿಚಾರವಂತರ ಆಶಯದಂತೆ ಕರ್ನಾಟಕದ ಬಿಜಾಪುರ, ಬೀದರ, ಗುಲಬರ್ಗಾ, ಮೈಸೂರು. ಧಾರವಾಡ, ಹುಬ್ಬಳ್ಳಿ, ಬೆಳಗಾವಿ, ನಿಪ್ಪಾಣಿ, ಕೋಲಾರ, ಶಿವಮೊಗ್ಗ ಮುಂತಾದೆಡೆಗಳಲ್ಲಿ ಹಲವು ಹತ್ತು ಬೌದ್ಧ ಅಧ್ಯಯನ ಕೇಂದ್ರಗಳು ಮತ್ತು ವಿಹಾರಗಳಲ್ಲಿ

ಕಾರ್ಯಕ್ರಮಗಳು ಆರಂಭವಾದವು, ಶಿಕ್ಷಣ ನೀಡುವ ಕೇಂದ್ರಗಳೂ ಆಗಿರುವುದನ್ನು ಇಂದು ಕಾಣಬಹುದಾಗಿದೆ. ಬಿ. ಬಸವಲಿಂಗಪ್ಪ ಅವರ ಅನಂತರ ಅವರ ಪುತ್ರ ಪ್ರಸನ್ನಕುಮಾರ ಹಾಗೂ ಎಫ್.ಎಚ್. ಜಕ್ಕಪ್ಪ ಅವರು ಆ ಶಿಕ್ಷಣ ಸಂಸ್ಥೆಗಳು ಮಾದರಿ ಶಿಕ್ಷಣ ಸಂಸ್ಥೆಗಳಾಗಿಸಲು ಅಹರ್ನಿಶಿ ದುಡಿಯುತ್ತಿದ್ದಾರೆ.

ಮೈಸೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕುಶಾಲನಗರದ ಬೈಲಕುಪ್ಪೆಯಲ್ಲಿ 1952ರಲ್ಲಿ ಬೌದ್ಧ ವಿಹಾರವನ್ನು ನಿರ್ಮಿಸಲಾಗಿದೆ. ಈ ಬೌದ್ಧ ಕೇಂದ್ರದಲ್ಲಿ ಶಾಲೆಯನ್ನು ಆರಂಭಿಸಲಾಗಿದ್ದು, ಅಲ್ಲಿ 30 ರಿಂದ 40 ಜನ ಶಿಕ್ಷಕರಾಗಿ ಸೇವೆಯಲ್ಲಿದ್ದಾರೆ. ಅವರಿಗೆ ಏಳೆಂಟು ಸಾವಿರ ರೂಪಾಯಿಗಳನ್ನು ಸಂಬಳದ ರೂಪದಲ್ಲಿ ನೀಡಲಾಗುತ್ತದೆ. ಶಿಕ್ಷಕರು ಸೇವಾಮನೋಭಾವದಿಂದ ದುಡಿದು ಮಕ್ಕಳ ಭವಿಷ್ಯವನ್ನು ರೂಪಿಸಲು ನಿರಂತರ ಪ್ರಯತ್ನಶೀಲಾಗಿರುತ್ತಾರೆ.

ಮೈಸೂರಿನ ಸರಸ್ವತಿಪುರಂನಲ್ಲಿ 1973ರಲ್ಲಿ ಆರಂಭವಾದ ಬೌದ್ಧ ವಿಹಾರದಲ್ಲಿ 1982ರಲ್ಲಿ ಶಿಕ್ಷಣ ನೀಡುವ ಕೇಂದ್ರವನ್ನು ಆರಂಭಿಸಲಾಯಿತು. ಇದರ ಸಂಸ್ಥಾಪಕ ಆಚಾರ್ಯ ಬುದ್ಧರಕ್ಷಿತ ಭಂತೆ ಅವರು. ಪ್ರಸ್ತುತ ಶಾರಾನಾ ನಂದಾ ಅವರಿದ್ದು ಇಲ್ಲಿಯ ಶಿಕ್ಷಣ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಮೆಡಿಟೇಶನ್, ಪಬ್ಬಜಾ, ಸಮ್ಮರ್ ಕ್ಯಾಂಪ್ ಇತ್ಯಾದಿ ತರಬೇತಿಗಳನ್ನು ನೀಡಲಾಗುತ್ತದೆ. ಎಲ್.ಕೆ.ಜಿ.ಯಿಂದ ಹತ್ತನೆಯ ತರಗತಿಯವರೆಗೆ ಇಲ್ಲಿ ಶಿಕ್ಷಣವನ್ನು ನೀಡಲಾಗುತ್ತದೆ. ಬೀದರ ಜಿಲ್ಲೆಯ ಭಾಲ್ಕಿಯಲ್ಲಿ 1978ರಂದು ಆರಂಭವಾದ ಬೌದ್ಧ ವಿಹಾರದ ಮೂಲ ಕವೂ ಶಿಕ್ಷಣವನ್ನು ನೀಡಲಾಗುತ್ತಿದೆ. ಬಾಲ್ಕಿಯ ಈ ಬೌದ್ಧ ಕೇಂದ್ರದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಮುಂದೆ ಮತ್ತ ಮುಂದಿನ ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ ಹೊರ ದೇಶಗಳಿಗೆ ಹೋಗಿ ಅಲ್ಲಲ್ಲಿಯ ಹೆಲ್ತ್‌ಕೇರ್ ಕೇಂದ್ರಗಳಲ್ಲಿ ಸೇರಿ ಕೆಲಸ ಮಾಡುತ್ತಾರೆ. 2004ರಲ್ಲಿ ಆರಂಭಿಸಲಾದ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಬಿ.ಎಸ್ಸಿ., ಬಿ.ಇ. ಮೊದಲಾದ ತಾಂತ್ರಿಕ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಇಲ್ಲಿ ಹದಿನಾರಕ್ಕೂ ಹೆಚ್ಚಿನ ಸಂಖ್ಯೆಯ ಬೋಧಕರಿದು ಅವರ ಸೇವೆಗಾಗಿ ಆರು ಸಾವಿರದಿಂದ ಹತ್ತು ಸಾವಿರದ ವರೆಗೆ ಸಂಬಳವನ್ನು ನೀಡಲಾಗುತ್ತದೆ. 407 ಜನ ವಿದ್ಯಾರ್ಥಿಗಳು, ಹದಿನಾರಕ್ಕೂ ಹೆಚ್ಚು ಜನ ಶಿಕ್ಷಕರು ಮೂರು ಜನ ವಾಹನ ಚಾಲಕರು, ಮೂರು ವಾಹನಗಳು, ಮೂರು ಜನ ಗುಮಾಸ್ತರು ಇದ್ದು ಪೂಜ್ಯ ನವಪಾಲ ಭಂತೇಜಿ ಅವರ ಮಾರ್ಗದರ್ಶನದಲ್ಲಿ ಶೈಕ್ಷಣಿಕ ಕಾರ್ಯವೂ ಬಿಡುವಿಲ್ಲದಂತೆ ನಡೆಯುತ್ತಿದೆ. ಕನ್ನಡ ಹಾಗೂ ಇಂಗ್ಲೀಷ್ ಮಾಧ್ಯಮಗಳೆರಡರಲ್ಲೂ ಮಕ್ಕಳಿಗೆ ಬೋಧಿಸಲಾಗುತ್ತದೆ. ಹೀಗೆ ಇಲ್ಲಿ ಧಾರ್ಮಿಕ ಶಿಕ್ಷಣದ ಜೊತೆ ಜೊತೆಯಲ್ಲಿಯೇ ಮಕ್ಕಳ ಭವಿಷ್ಯರೂಪಿಸುವ, ಜ್ಞಾನ ವೃದ್ಧಿಸುವ, ಸಮಕಾಲೀನ ಸಮಾಜದಲ್ಲಿ, ದೇಶದಲ್ಲಿ ಸರಿಯಾದ ರೀತಿಯಲ್ಲಿ ಬದುಕುವ, ಮನುಷ್ಯ–ಪ್ರಾಣಿಗಳಲ್ಲಿ ದಯೆಯನ್ನು ತೋರುವ ಶಿಕ್ಷಣವನ್ನು ನೀಡಲಾಗುತ್ತದೆ. ನುರಿತ ಅಧ್ಯಾಪಕರ ಸುಪರ್ದಿಯಲ್ಲಿ ಮಕ್ಕಳು ಆಧುನಿಕ ಸಂದರ್ಭದ

ಸಕಲ ಸಾಧನಗಳನ್ನು ಬಳಸಿಕೊಂಡು ತಮ್ಮನ್ನು ತಾವು ರೂಪಿಸಿಕೊಳ್ಳಲು ಇಲ್ಲಿಯ ಶಿಕ್ಷಣ ವ್ಯವಸ್ಥೆಯು ಪೂರಕವಾಗಿ ಕಾರ್ಯನಿರ್ವಹಿಸುತ್ತಿರುವುದು ಗಮನೀಯವಾಗಿದೆ.

ಬೆಂಗಳೂರಿನ ಅಂಜನಾ ನಗರದಲ್ಲಿಯ ಸ್ಫೂರ್ತಿಧಾಮ ಬೌದ್ಧ ವಿಹಾರವು ಕಳೆದ ಹಲವು ವರ್ಷಗಳ ಹಿಂದೆಯೇ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿ ಕಾರ್ಯಪ್ರವೃತಾವಾಗಿರುವುದು ಅಲ್ಲಿನ ವಕ್ತೃಗಳಿಂದ ತಿಳಿದುಬರುತ್ತದೆ. ಒಂದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಶಿಕ್ಷಣ ನೀಡಲಾಗುತ್ತದೆ. ಎಸ್.ಮರಿಸ್ವಾಮಿ ಅವರು ತಮ್ಮ 16ನೆಯ ವಯಸ್ಸಿನಲ್ಲಿಯೇ ಸಾಂಪ್ರದಾಯಿಕ ದೇವರುಗಳ ಪೂಜೆ–ಪುನಸ್ಕಾರಗಳನ್ನು ತಿರಸ್ಕರಿಸುವ ಸ್ವಭಾವವನ್ನು ಹೊಂದಿದ್ದರು. ಅನಂತರದಲ್ಲಿ ಬುದ್ಧನನ್ನು ಅಧ್ಯಯನ ಮಾಡುತ್ತ ಬೌದ್ಧಧಮ್ಮದತ್ತ ಒಲವನ್ನು ಹೊಂದಿದ್ದರು. 1990ರಲ್ಲಿ ಅಡಿಸ್ನಲ್ ಪೋಲೀಸ್ ಕಮಿಷನರ್ ಆಗಿದ್ದ ಎಸ್.ಮರಿಸ್ವಾಮಿ ಅವರನ್ನು ಬೌದ್ಧ ಉಪಾಸಕರು ಸ್ಫೂರ್ತಿಧಾಮದ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಕೇಳಿಕೊಂಡಾಗ ಅವರು ಮನಃಪೂರ್ತಿ ಅದನ್ನು ಒಪ್ಪಿಕೊಂಡರು. ಅವರು ಅಧ್ಯಕ್ಷರಾಗುವ ಸಂದರ್ಭದಲ್ಲಿ ಥೈಲ್ಯಾಂಡ್, ಶ್ರೀಲಂಕಾ, ಬರ್ಮಾದಂತಹ ಬೌದ್ಧ ದೇಶಗಳಿಂದಲೂ ಕೂಡ ಮಹಾಬೌದ್ಧ ಭಿಕ್ಕುಗಳು ಹಾಗೂ ಜನಸಾಮಾನ್ಯರೂ ಆಗಮಿಸಿದ್ದರು.

ಎಸ್.ಮರಿಸ್ವಾಮಿ ಅವರ ಮುಂದಾಳ್ತನದಲ್ಲಿ ಬೌದ್ಧ ವಿಹಾರದ ಅಡಿಯಲ್ಲಿ ಆರಂಭದವಾದ ಶಿಕ್ಷಣ ಸಂಸ್ಥೆಯು ಇಂದಿಗೂ ಮಕ್ಕಳಿಗೆ ಉಪಯುಕ್ತ ಶಿಕ್ಷಣ ನೀಡುವಲ್ಲಿ ಪ್ರವೃತ್ತವಾಗಿದೆ. ಅಲ್ಲಿಯ ಶಿಕ್ಷಕರು 10 ರಿಂದ 15 ಸಾವಿರ ರೂಪಾಯಿಗಳಷ್ಟು ಸಂಬಳವನ್ನು ಪಡೆದು ನಿಷ್ಟುರ ಸೇವೆಯಲ್ಲಿ ತೊಡಗಿದ್ದಾರೆ. ಸ್ಫೂರ್ತಿಧಾಮದ ಮೂಲಕ 'ಸಂವಾದ' ಎಂಬ ಮಾಸ ಪತ್ರಿಕೆಯೊಂದು ಇಂದೂಧರ ಹೊನ್ನಾಪುರ ಅವರ ಸಂಪಾದಕತ್ವದಲ್ಲಿ ಆರಂಭ ಮಾಡಿ ಆ ಮೂಲಕ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಹಾಗೂ ಸಾಹಿತ್ಯಿಕ ವೈಚಾರಿಕ ಚಿಂತನೆಗಳನ್ನು ಜನಮನಕ್ಕೆ ಮುಟ್ಟಿಸುವ ಕಾರ್ಯ ಬಿಡದೇ ನಡೆದಿರುವುದನ್ನು ವಕ್ತೃಗಳು ಸ್ಪಷ್ಟಪಡಿಸುತ್ತಾರೆ.

ಹತ್ಯಾಳ

ಬೀದರ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನ ಹತ್ಯಾಳ ಗ್ರಾಮದಲ್ಲಿಯ ಬೌದ್ಧ ಕೇಂದ್ರದ ಮೂಲಕ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಎಂದು ಒಂದನೆಯ ತರಗತಿಯಿಂದ ಮಕ್ಕಳಿಗೆ ಬೋಧನೆಯನ್ನು ಆರಂಭಿಸಲಾಗಿದೆ. ಆಧುನಿಕ ಜಗತ್ತಿನಲ್ಲಿ ಬೆಳೆದು ಮಗ ತನ್ನ ಕಾಲ ಮೇಲೆ ತಾನು ನಿಂತು ಸ್ವಾಭಿಮಾನದ ಬದುಕನ್ನು ರೂಪಿಸಿಕೊಳ್ಳುವಲ್ಲಿ ಈ ಬೌದ್ಧ ಕೇಂದ್ರ ಶ್ರಮಿಸುತ್ತಿರುವುದನ್ನು ಅಲ್ಲಿಗೆ ಭೇಟಿಕೊಟ್ಟಾಗ ಅರಿಯಬಹುದಾಗಿದೆ. ಮಕ್ಕಳ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಗಾಗಿಯೇ ಹತ್ಯಾಳ ಬೌದ್ಧಕೇಂದ್ರ ಅಲ್ಲಿಯ ಹಣಮಂತರಾವ ಕಾಂಬಳೆ ಅವರ ಆಶಯ, ಸುತ್ತಮುತ್ತಲಿನ ಬೌದ್ಧ ಉಪಾಸಕರ ಮನೋಭಿಲಾಷೆಯಂತೆ ಪೂಜ್ಯ ವಿನಯ ರಕ್ಷಿತ ಭಂತೇಜಿ ಅವರು ಮುನ್ನಡೆಸಿಕೊಂಡು ಬರುತ್ತಿದ್ದಾರೆ.

ಕ್ರಿ.ಶ. 2016ರಲ್ಲಿ ಆರಂಭಗೊಂಡಿರುವ ಈ ಬೌದ್ಧ ವಿಹಾರದ ಅಭಿವೃದ್ಧಿಗಾಗಿ ಶಿಕ್ಷಣ ಕೇಂದ್ರ ಆರಂಭಿ ಸುವುದಕ್ಕಾಗಿ ಡಾ. ಅಂಬೇಡ್ಕರ್ ಸ್ಮಾರಕ ಸಮಿತಿ ಲಂಡನ್ ಇವರು ಧನಸಹಾಯವನ್ನು ನೀಡಿದ್ದಾರೆ. ಇಲ್ಲಿಯ ಶಿಕ್ಷಕರಿಗೆ 8 ರಿಂದ 10 ಸಾವಿರ ರೂಪಾಯಿಗಳನ್ನು ಸಂಬಳ ನೀಡಲಾಗುತ್ತದೆ. ಇಂದು ಹತ್ಯಾಳ ಗ್ರಾಮದ ಅದರ ಅಕ್ಕಪಕ್ಕದ ಗ್ರಾಮಗಳ ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ಸಾಮಾನ್ಯ ಶಿಕ್ಷಣವನ್ನು ಪಡೆದುಕೊಳ್ಳುತ್ತಿದ್ದಾರೆ. ಲಂಡನ್, ಅಮೇರಿಕಾ ರಾಷ್ಟ್ರಗಳರರೂ ಈ ವಿಹಾರದ ಅಭಿವೃದ್ಧಿಗಾಗಿ ಮಿಡಿಯುವವರಾಗಿದ್ದಾರೆ ಎಂಬುದಕ್ಕೆ ಉದ್ಘಾಟನೆಯಲ್ಲಿ ಭಾಗವಹಿಸಿದ 18 ಜನರ ತಂಡವೇ ಸಾಕ್ಷಿಯಾಗಿದೆ. ಹೀಗೆ, ಇಲ್ಲಿ ಸಾಮಾನ್ಯ ಶಿಕ್ಷಣದೊಂದಿಗೆ ಬೌದ್ಧ ತ್ರಿಸರಣ, ಪಂಚಶೀಲ ಇತ್ಯಾದಿಗಳನ್ನು ಬೋಧಿಸುತ್ತ ಮಕ್ಕಳಿಗೆ ನಿಜವಾದ ಧಮ್ಮದ ಅರಿವನ್ನು ಇಲ್ಲಿ ನೀಡಲಾಗುತ್ತದೆ.

ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನಲ್ಲಿ 1978ರಲ್ಲಿ ಆರಂಭಗೊಂಡಿರುವ 'ಕರುಣ ಬೌದ್ಧ ವಿಹಾರ'ದ ವಿಶಿಷ್ಟ ಕಾರ್ಯವೆಂದರೆ; ಬೌದ್ಧಧಮ್ಮದ ಪರಿಚಯ ಹಾಗೂ ಪ್ರಸಾರದೊಂದಿಗೆ ಶಿಕ್ಷಣ ಸಂಸ್ಥೆಯನ್ನು ಆರಂಭಿಸಿದ್ದು. ಇಂದು ಈ ವಿಹಾರದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಮಾಧ್ಯಮಗಳಲ್ಲಿ ಮಕ್ಕಳಿಗೆ ಶೀಕ್ಷಣವನ್ನು ನೀಡಲಾಗುತ್ತಿದೆ. 2003-04ರಲ್ಲಿ ಆರಂಭವಾಗಿರುವ ಶಿಕ್ಷಣ ನೀಡುವ ಕಾರ್ಯವೂ ನಿರಂತರ ನಡೆದು ಬರುತ್ತಿದೆ. ಇಲ್ಲಿ ಓದು ಮುಗಿಸಿದ ವಿದ್ಯಾರ್ಥಿಗಳು ಬಿ.ಎಸ್.ಸಿ., ಬಿ.ಇ. ಓದಿನಲ್ಲಿ ತೊಡಗಿಸಿಕೊಂಡಿದ್ದಾರೆ. ಭಾಲ್ಕಿಯ ಕರಣ ಬುದ್ಧವಿಹಾರದಲ್ಲಿ 16 ಜನ ಶಿಕ್ಷಕರಿದ್ದು ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ವಿವಿಧ ವರ್ಗಗಳಲ್ಲಿ ಓದುತ್ತಿದ್ದು, ಅವರ ಅನುಕೂಲಕ್ಕಾಗಿ ಮೂರು ಶಾಲಾ ವಾಹನಗಳನ್ನಿರಿಸಲಾಗಿದೆ. ಬೆಳಗ್ಗೆ ಅವರನ್ನು ಅವರವರ ಮನೆಯಿಂದ ಶಾಲೆಗೆ, ಶಾಲೆ ಮುಗಿದ ಮೇಲೆ ಮನೆಗೆ ತಲುಪಿಸುವುದಕ್ಕಾಗಿ ಈ ಅನುಕೂಲತೆಯನ್ನು ಮಾಡಿಕೊಡಲಾಗಿದೆ. ಇಲ್ಲಿರುವ ಪೂಜ್ಯ ನವಪಾಲ ಭಂತೇಜಿ ಅವರು ಧಮ್ಮದ ಅರಿವನ್ನು ಜನರಲ್ಲಿ ಮೂಡಿಸುತ್ತಲೇ ಮಕ್ಕಳ ಸುಸೂತ್ರವಾದ ಶಿಕ್ಷಣಕ್ಕಾಗಿ ಶ್ರಮಿಸುತ್ತಿದ್ದಾರೆ. ಇಲ್ಲಿ ಓದುವ ಮಕ್ಕಳು ನಾಳಿನ ನಾಡಿನ ಸತ್ಪ್ರಜೆಗಳಾಗಬೇಕು ಎಂಬ ಹಂಬಲ ಅವರದು. ಇದರೊಂದಿಗೆ ಬೌದ್ಧ ವಿಹಾರದಲ್ಲಿ ಮಹಾನ್ ಸಾಧಕರಾದ ಮಹಾತ್ಮ ಜ್ಯೋತಿಬಾ ಫುಲೆ, ಮಹಾಮಾತೆ ಸಾವಿತ್ರಿಬಾಯಿ ಫುಲೆ, ಮಾತೆ ರಮಾಬಾಯಿ ಅಂಬೇಡ್ಕರ್ ಬುದ್ಧ ಪೂರ್ಣಿಮಾದಂತಹ ಜಯಂತಿ ಕಾರ್ಯಕ್ರಮಗಳನ್ನು ಆಯೋಜಿಸಿ ಈ ದೇಶದ ಇತಿಹಾಸದ ಅರಿವನ್ನು ಮಾಡಿಕೊಡುವಲ್ಲಿ ಮುಂದಾದ್ದದ್ದು ಕಂಡುಬರುತ್ತದೆ.

ಹೀಗೆ, ಕರ್ನಾಟಕದಾದ್ಯಂತ ಇರುವ ಬೌದ್ಧ ಕೇಂದ್ರಗಳಲ್ಲಿ ಕೆಲವು ಮಾತ್ರ ನೈತಿಕ ಶಿಕ್ಷಣಕ್ಕೆ ಒತ್ತು ನೀಡಿ ತಮ್ಮ ವಿಹಾರದ ಅಡಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದಿವೆ. ಇಂದಿನ ವ್ಯವಹಾರಿಕ ಜೀವನದಲ್ಲಿ ಮಕ್ಕಳ ನೈಜವಾದ ಬದುಕಿನ ಮೌಲ್ಯಗಳನ್ನು ಕಲಿತು ತಮ್ಮ ಕುಟುಂಬಕ್ಕೆ ತಮ್ಮೂರಿಗೆ ಅಂತೆಯೇ ತಮ್ಮ ದೇಶಕ್ಕೆ ನಿಷ್ಠರಾಗಿರುವಂತಹ ನಾಗರಿಕರನ್ನು ಈ ಶಿಕ್ಷಣ ಸಂಸ್ಥೆಗಳು ರೂಪಿಸುವಲ್ಲಿ ದುಡಿಯುತ್ತಿರುವುದು

ಗಮನಾರ್ಹವಾಗಿದೆ. ಇಂದಿನ ಕಾಲಕ್ಕೆ ತಕ್ಕಂತೆ ಕನ್ನಡ ಹಾಗೂ ಆಂಗ್ಲ ಮಾಧ್ಯಮಗಳೆರಡರಲ್ಲೂ ಮಕ್ಕಳಿಗೆ ಬೋಧನೆ ನೀಡುತ್ತ ಭಾರತದ ಅಂತೆಯೇ ಜಾಗತಿಕ ನೆಲೆಯ ಜ್ಞಾನವನ್ನು ಮಕ್ಕಳಿಗೆ ಮನನ ಮಾಡಿಕೊಡುವ ಕೆಲಸವನ್ನು ಆಧುನಿಕ ಬೌದ್ಧ ಅಧ್ಯಯನ ಕೇಂದ್ರಗಳು ಕೈಗೆತ್ತಿಕೊಂಡಿವೆ. ಅಲ್ಲಿ ದುಡಿಯುವ ಶಿಕ್ಷಕರು ಸೇವಾಮನೋಭಾವನೆಯಿಂದ ಕೆಲಸ ನಿರ್ವಹಿಸುತ್ತ ಮಕ್ಕಳ ಭವಿಷ್ಯವನ್ನು ರೂಪಿಸುತ್ತಿದ್ದಾರೆ. ಇಂತಹ ಬುದ್ಧ ವಿಹಾರಗಳು ಮತ್ತು ಕೇಂದ್ರ ಗಂಡು–ಹೆಣ್ಣು, ಜಾತಿ–ಭೇದ, ಬಡವ–ಶ್ರೀಮಂತ ಎಂಬಿತ್ಯಾದಿ ಭೇದಗಳಿಲ್ಲದಿರುವುದು ಕಂಡುಬಂದಿರುತ್ತದೆ ಎಂದೇ ಹೇಳಬಹುದು. ಸರ್ವರಿಗೂ ಸಮನಾದ ಅವಕಾಶಗಳನ್ನು ಪ್ರತಿ ಹಂತರದಲ್ಲಿಯೂ ಒದಗಿಸಲು ಅಲ್ಲಿಯ ಜವಾಬ್ದಾರಿಯುತ ಪೂಜ್ಯ ಭಂತೇಜಿಗಳು ನಿರ್ವಹಿಸುತ್ತಾರೆ. ಇಂತಹ ನಿಸ್ವಾರ್ಥ ಸೇವೆಯಲ್ಲಿ ತೊಡಗಿರುವ ಪೂಜ್ಯ ಭಂತೇಜಿಗಳು, ಅಲ್ಲಿಯ ಶಿಕ್ಷಕರು ಮಕ್ಕಳ ಬುದ್ಧಿಯನ್ನದರಳಿಸಿ ಬೆಳೆಸುವಲ್ಲಿ ಧನ್ಯತಾಭಾವ ಅನುಭವಿಸುತ್ತಾರೆ. ಇಂತಹ ಬೌದ್ಧ ಅಧ್ಯಯನ ಕೇಂದ್ರಗಳು ಹಾಗೂ ವಿಹಾರಗಳಲ್ಲಿ ಓದಿದ ಕೆಲವು ವಿದ್ಯಾರ್ಥಿಗಳು ಇಂದು ದೇಶ–ವಿದೇಶಗಳಲ್ಲಿ ಅಧ್ಯಯನ–ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ ಎಂಬುದು ಕೂಡ ಒಂದು ಹೆಮ್ಮೆಯ ಸಂಗತಿಯೇ ಆಗಿರುತ್ತದೆ.

## ಗ್ರಂಥಋಣ


1. ಡಾ.ತಾಳ್ತಜೆ ವಸಂತಕುಮಾರ, **ಬೌದ್ಧಾಯನ,** ಕನ್ನಡ ವಿಭಾಗ, ಮುಂಬಯಿ ವಿ.ವಿ. – 2005
2. ಡಾ.ತಾಳ್ತಜೆ ವಸಂತಕುಮಾರ, **ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ,** ವಿನಯ ಪ್ರಕಾಶನ, ಬೆಂಗಳೂರು – 1988
3. ಡಾ.ಸೂರ್ಯನಾಥ ಕಾಮತ, **ಕರ್ನಾಟಕದ ಸಂಕ್ಷಿಪ್ತ ಇತಿಹಾಸ,** ಒ.ಅ.ಅ. ಪಬ್ಲಿಕೇಶನ, ಬೆಂಗಳೂರು–2013
4. ಜಯದೇವಿ ಗಾಯಕವಾಡ, **ಬೌದ್ಧ ವಿದ್ಯಾಕೇಂದ್ರ ಸನ್ನತಿ ಒಂದು ಅಧ್ಯಯನ,** ಗು.ವಿ.ಗು – 2001
5. ಮುಗುಳಿ ರಂ.ಶ್ರೀ. **: ಕನಾಟಕದ ಸಾಂಸ್ಕೃತಿಕ ಪರಂಪರೆ,** ಧಾರವಾಡ–1976.